# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ದಿನೇಶ್ ಗೂಳಿಗೌಡ
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 232

ಉತ್ತರಿಸಬೇಕಾದ ದಿನಾಂಕ : 16-07-2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2023-24 ನೇ ಸಾಲಿನಲ್ಲಿ ಸಹಕಾರ ಸಂಘ/ಬ್ಯಾಂಕ್‌ಗಳಿಂದ ಈ ಹಿಂದೆ ರೈತರಿಗೆ ಶೂನ್ಯ ಬಡ್ಡಿದರದಲ್ಲಿ ನೀಡಲಾಗಿರುವ ಸಾಲದ ಮೊತ್ತ ಎಷ್ಟು; | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕುಗಳ ಮೂಲಕ 2023-24 ನೇ ಸಾಲಿನಲ್ಲಿ 29,26,910 ರೈತರಿಗೆ ರೂ.22,982.10 ಕೋಟಿಗಳ ಬೆಳೆ ಸಾಲ ವಿತರಿಸಲಾಗಿದೆ. |
| ಆ) | ರಾಜ್ಯದಲ್ಲಿ ಸಹಕಾರ ಸಂಘ/ಬ್ಯಾಂಕ್ ಗಳಿಂದ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 2024-25 ನೇ ಸಾಲಿಗೆ ನೀಡಲು ಉದ್ದೇಶಿಸಿರುವ ಸಾಲದ ಮೊತ್ತ ಎಷ್ಟು; | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕುಗಳ ಮೂಲಕ 2024-25 ನೇ ಸಾಲಿನಲ್ಲಿ 35.10 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ರೂ.25,000 ಕೋಟಿಗಳ ಅಲ್ಪಾವಧಿ ಕೃಷಿ ಸಾಲ ಮತ್ತು ಪಶುಸಂಗೋಪನೆಗೆ ದುಡಿಯುವ ಬಂಡವಾಳ ಸಾಲ ವಿತರಿಸಲು ಗುರಿ ಹೊಂದಲಾಗಿದೆ. |
| ಇ) | ಪ್ರಸ್ತುತ ಈವರೆಗೆ ಎಷ್ಟು ಸಾಲ ವಿತರಣೆ ಮಾಡಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು) | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕುಗಳ ಮೂಲಕ ದಿನಾಂಕ:06-07-2024 ರವರೆಗೆ 7,80,363 ರೈತರಿಗೆ ರೂ.6799.17 ಕೋಟಿಗಳ ಬೆಳೆ ಸಾಲ ವಿತರಿಸಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಈ) | ಪ್ರತಿ ಜಿಲ್ಲೆಗೆ ಅಂದಾಜು ಎಷ್ಟು ಮೊತ್ತದ ಸಾಲವನ್ನು ಎಷ್ಟು ರೈತರುಗಳಿಗೆ ನೀಡಲು ಉದ್ದೇಶಿಸಲಾಗಿದೆ: (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಸಾಲ ವಿತರಿಸಿದ ಮಾಹಿತಿ, ಡಿಸಿಸಿ ಬ್ಯಾಂಕುಗಳಲ್ಲಿರುವ ಬಂಡವಾಳ ಮತ್ತು ನಬಾರ್ಡ್‌ನ ಪುನರ್ಧನ ಆಧರಿಸಿ ಪ್ರತೀ ಜಿಲ್ಲೆಗೆ ಸರಾಸರಿ 1.13 ಲಕ್ಷ ರೈತರಿಗೆ |

| | | |
|---|---|---|
| | | ರೂ.806.00 ಕೋಟಿಗಳ ಅಲ್ಪಾವಧಿ ಕೃಷಿ ಸಾಲ ವಿತರಿಸಲು ಉದ್ದೇಶಿಸಲಾಗಿದೆ. ಜಿಲ್ಲಾವಾರು ಗುರಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ. |
| ಉ) | ಕೃಷಿ ಸಾಲ ಗುರಿಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ. ಯಾವ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು? | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ/ಡಿಸಿಸಿ ಬ್ಯಾಂಕುಗಳು/ಪಿಕಾರ್ಡ್ ಬ್ಯಾಂಕುಗಳ ಮೂಲಕ 2023-24 ನೇ ಸಾಲಿನಲ್ಲಿ 35 ಲಕ್ಷ ರೈತರಿಗೆ ರೂ.25,000 ಕೋಟಿಗಳಷ್ಟು ಸಾಲ ವಿತರಣೆ ಮಾಡುವ ಗುರಿ ಹೊಂದಲಾಗಿದ್ದು, 29,26,910 ರೈತರಿಗೆ ರೂ.22,982.10 ಕೋಟಿಗಳ ಬೆಳೆ ಸಾಲ, 54,255 ರೈತರಿಗೆ ರೂ.1517.77 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಣೆ ಗುರಿ ಹೊಂದಲಾಗಿದ್ದು ಹೀಗೆ ಒಟ್ಟು 29,81,165 ರೈತರಿಗೆ ರೂ.24,499.87 ಕೋಟಿಗಳ ಕೃಷಿ ಸಾಲ ವಿತರಿಸಲಾಗಿದ್ದು, ಶೇ.98 ರಷ್ಟು ಸಾಧನೆ ಮಾಡಲಾಗಿದೆ.<br><br>2024-25 ನೇ ಸಾಲಿಗೆ 35.10 ಲಕ್ಷ ರೈತರಿಗೆ ರೂ.25,000 ಕೋಟಿಗಳ ಅಲ್ಪಾವಧಿ ಕೃಷಿ ಸಾಲ ಮತ್ತು 0.90 ಲಕ್ಷ ರೈತರಿಗೆ ರೂ.2000.00 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಿಸಲು ಗುರಿ ನಿಗದಿಪಡಿಸಿದ್ದು, ರೂ.2566.02 ಕೋಟಿಗಳ ಹೆಚ್ಚಿನ ಕೃಷಿ ಸಾಲ ವಿತರಿಸಲಾಗುವುದು. |

**ಸಂಖ್ಯೆ: ಸಿಒ 143 ಸಿಎಲ್ಎಸ್ 2024**

K.N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 232 ಕ್ಕೆ ಅನುಬಂಧ-1

2024-25 ನೇ ಸಾಲಿಗೆ ಸಹಕಾರ ಸಂಘಗಳ ಮೂಲಕ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ ನೀಡಲು ನಿಗದಿಪಡಿಸಿದ ಗುರಿ ಮತ್ತು ದಿ.6-7-2024 ರ ವರೆಗೆ ಸಾಲ ವಿತರಿಸಿದ ಮೊತ್ತದ ವಿವರ( ರೂ.ಕೋಟಿಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ಗುರಿ | | ಸಾಧನೆ | |
|---|---|---|---|---|---|
| | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| 1 | ಬಾಗಲಕೋಟೆ | 281440 | 1449.00 | 69247 | 334.94 |
| 2 | ಬೆಳಗಾವಿ | 559387 | 3175.00 | 226043 | 1474.04 |
| 3 | ಬೆಂಗಳೂರು ನಗರ | 13846 | 97.00 | 1374 | 9.78 |
| 4 | ಬೆಂಗಳೂರು ಗ್ರಾಮಾಂತರ | 40985 | 285.00 | 3447 | 24.81 |
| 5 | ರಾಮನಗರ | 84517 | 591.00 | 7140 | 53.77 |
| 6 | ವಿಜಯಪುರ | 272493 | 1863.00 | 27837 | 205.56 |
| 7 | ವಿಜಯನಗರ | 84185 | 686.00 | 64495 | 628.02 |
| 8 | ಬಳ್ಳಾರಿ | 59816 | 492.00 | 39582 | 374.34 |
| 9 | ಬೀದರ | 193159 | 881.00 | 24646 | 99.00 |
| 10 | ಶಿವಮೊಗ್ಗ | 94154 | 1127.00 | 30594 | 327.34 |
| 11 | ಮಂಡ್ಯ | 171546 | 1055.00 | 2986 | 18.43 |
| 12 | ಮೈಸೂರು | 104154 | 994.00 | 10107 | 144.34 |
| 13 | ಚಾಮರಾಜನಗರ | 33231 | 338.00 | 3004 | 33.59 |
| 14 | ಚಿಕ್ಕಮಗಳೂರು | 69851 | 983.00 | 36557 | 552.89 |
| 15 | ಚಿತ್ರದುರ್ಗ | 67569 | 522.00 | 3962 | 37.65 |
| 16 | ರಾಯಚೂರು | 97588 | 605.00 | 22241 | 94.55 |
| 17 | ಕೊಪ್ಪಳ | 56936 | 331.00 | 6735 | 40.95 |
| 18 | ಉತ್ತರ ಕನ್ನಡ | 105231 | 994.00 | 75753 | 880.35 |
| 19 | ಹಾಸನ | 196062 | 1137.00 | 8207 | 44.64 |
| 20 | ಯಾದಗಿರ | 65355 | 275.00 | 2991 | 13.06 |
| 21 | ಕಲಬುರಗಿ | 147324 | 591.00 | 7522 | 41.67 |
| 22 | ಕೋಲಾರ | 29354 | 343.00 | 2527 | 33.34 |
| 23 | ಚಿಕ್ಕಬಳ್ಳಾಪುರ | 37108 | 425.00 | 3665 | 42.31 |
| 24 | ಕೊಡಗು | 40985 | 819.00 | 23487 | 542.88 |
| 25 | ತುಮಕೂರು | 176708 | 738.00 | 28401 | 152.25 |
| 26 | ದಾವಣಗೆರೆ | 155077 | 896.00 | 8530 | 62.24 |
| 27 | ಉಡುಪಿ | 47631 | 691.00 | 4074 | 61.44 |
| 28 | ದಕ್ಷಿಣ ಕನ್ನಡ | 102462 | 1869.00 | 17988 | 338.69 |
| 29 | ಹಾವೇರಿ | 51244 | 266.00 | 6724 | 49.26 |
| 30 | ಗದಗ | 34942 | 223.00 | 4812 | 35.69 |
| 31 | ಧಾರವಾಡ | 35660 | 259.00 | 5685 | 47.35 |
| | **ಒಟ್ಟು** | **3510000** | **25000.00** | **780363** | **6799.17** |

ಸಹಕಾರ ಸಂಘಗಳ ಅಪರ ನಿಬಂಧಕರು
(ಪತ್ತು)
ಸಹಕಾರ ಸಂಘಗಳ ನಿಬಂಧಕರ ಕಛೇರಿ